ಕೃತಕ ರೇಷ್ಮೆಯ ನೂಲಿನ ಬೆಲೆಯು ಬಹುಶಃ ಉತ್ಪಾದನ ಹಾಗೂ ಸಾರಿಗೆ ವೆಚ್ಚಗಳ ಹೆಚ್ಚಳದಿಂದ ಏರಿರಬಹುದು. ಆದಾಗ್ಯೂ ಸರಕಾರವು ಈ ವಿಷಯವನ್ನು ಕೆಂದ್ರ ಸರಕಾರದ ಟೆಕ್ಸ್‌ಟಾಯಿಲ್ ಕಮೀಷನರವರೊಡನೆ ವ್ಯವಹರಿಸಿ ಕೃತಕ ರೇಷ್ಮೆ ನೇಕಾರರ ತೊಂದರೆಯನ್ನು ಎಷ್ಟರವಂಟ್ಟಿಗೆ ಪರಿಹರಿಸ ಬಹುದೆಂಬ ಬಗ್ಗೆ ಪ್ರಯತ್ನಿಸುವುದು.

ಶ್ರೀ ಕಡಪಟ್ಟಿ ಶಿವಸಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ಕೃತಕ ರೇಷ್ಮೆಯ ದರವನ್ನು ಹೆಚ್ಚಿಸಿರುವು ದರ ಬಗ್ಗೆ ಈಗಾಗಲೇ ಸರ್ಕಾರಕ್ಕೆ ತಿಳಿಸಲಾಗಿದೆ. ಆದುದರಿಂದ ಈಗ ಮಾನ್ಯ ಸಚಿವರು ಇದರ ಹೊಣೆಗಾರಿಕೆ ನಮ್ಮದಲ್ಲ ಎಂದು ಹೇಳುವುದು ಸರಿಯಾದುದಲ್ಲ. ಆ ಬಡ ನೇಕಾರರನ್ನು ಸುಧಾರಣೆ ಮಾಡಲು ಸರ್ಕಾರ ಈಗಲಾದರೂ ಕ್ರಮ ಕೈಗೊಳ್ಳಬೇಕು. ಇಲ್ಲದೆ ಹೋದರೆ ಅವರು ಮುಂದೆ ಉಪವಾಸ ಮಾಡುವವರಿದ್ದಾರೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಸ್ವಯಂ ಕಂಳಿತುಕೊಳ್ಳಕೊಡದು. ಬರೀ ಟೆಕ್ಸ್‌ಟೈಲ್ ಕಮೀಷನರ್ ಹತ್ತಿರ ಮಾತನಾಡಿದೆ. ಕೆಲಸ ಆಗಲಿಲ್ಲ ಅಂತ ಹೇಳದೆ ಇದರ ಬಗ್ಗೆ ಆ ಬಡ ನೇಕಾರರಿಗೆ ಅನುಕೂಲವಾಗುವ ಹಾಗೆ ಸರ್ಕಾರ ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯಕ್ರಮ ಕೈಗೊಂಡು ರಾಷ್ಟ್ರದಲ್ಲಿರುವ ಕೃತಕ ನೂಲಿನ ದರ ಕಡಿಮೆ ದರದಲ್ಲಿ ಸಿಗುವ ಹಾಗೆ ಅವರಿಗೆ ಸರಬರಾಜು ಮಾಡಿಕೊಡುವ ಹಾಗೆ ತೀವ್ರಗತಿಯಲ್ಲಿ ಸುಧಾರಣೆ ಮಾಡಿ ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಈವಾಗ ಅದರ ಬಗ್ಗೆ ಸಲಹೆ ಕೊಟ್ಟಿದ್ದಾರೆ. ಇದನ್ನು ಪರಿಹಾರ ಮಾಡುವುದಕ್ಕೇನಾದರೂ ಸಾಧ್ಯವಾದರೆ ಗಮನ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

## ನಿಯಮ ೩೩ಳಿ ರ ಮೇರೆಗೆ.

ಅಧ್ಯಕ್ಷರು.—ಈಗ ಸಭೆಯ ಮುಂದೆ ಇದರ ಬಗ್ಗೆ ೩೧ ವಿಷಯಗಳು ಇವೆ. ಮಾನ್ಯ ಸದಸ್ಯರೆಲ್ಲರೂ ಈ ಬಗ್ಗೆ ಅದಷ್ಟು ಬಂಟ್ಟಿಗೆ ಸಂಕ್ಷಿಪ್ತವಾಗಿ ಹೇಳಬೇಕು.

### (i) ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ.

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಕೇಂದ್ರದ ಉಕ್ಕು ಖಾತೆಯ ಸಚಿವರಾದ ಶ್ರೀಮಾನ್ ಟಿ.ಸಿ. ಸಾತೆಯವರು ವಿಜಯನಗರದ ಉಕ್ಕು ಕಾರ್ಖಾನೆಯ ಬಗ್ಗೆ ಏನು ಹೇಳಿದ್ದಾರೆ ಎಂದರೆ ಕರ್ನಾಟಕ ಸರ್ಕಾರ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಡದೇ ಹೋದರೆ ಅಲ್ಲಿ ಕೆಲಸವನ್ನು ನಿಲ್ಲಿಸುತ್ತೇವೆಂದು ಒಂದು ಹೇಳಿಕೆಯನ್ನು ಪತ್ರಿಕೆಗಳಲ್ಲಿ ಕೊಟ್ಟಿದ್ದಾರೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ಏನು ಉತ್ತರ ಕೊಡುತ್ತಾರೆಂದು ನಾನು ಅವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು).—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಮಂತ್ರಿಗಳು ಹೇಳಿರತಕ್ಕಂಥಾ ಹೇಳಿಕೆ ದುರಾದೃಷ್ಟಕರವೆಂದು ನಾನು ಹೇಳುತ್ತೇನೆ. ರಾಜ್ಯ ಸರ್ಕಾರ ೧೯೭೨ನೇ ಇಸವಿಯಲ್ಲಿ ಈ ಬಗ್ಗೆ ವಿದ್ಯುಚ್ಛಕ್ತಿಯನ್ನು ಕೊಡುವ ಬಗ್ಗೆ ಒಪ್ಪಿಗೆ ಕೊಟ್ಟಿದೆ. ಆದರೆ ಈಗ ನಮ್ಮಲ್ಲಿ ವಿದ್ಯುತ್ ಕೊರತೆ ಬಂದಿರುವುದರಿಂದ ಅದರ ಆಧಾರದ ಮೇಲೆ ಊಹೆ ಮಾಡಿ ಹೇಳಿಕೆ ಕೊಟ್ಟಿರಬಹುದು. ಒಟ್ಟಿನಲ್ಲಿ ಇದು ವಾಸ್ತವಾಂಶ ಅಲ್ಲ.

### (ii) ಪುತ್ತೂರು ತಾಲ್ಲೂಕಿನಲ್ಲಿ ದರಖಾಸ್ತು ಭೂಮಿಯನ್ನು ಹಂಚುವ ಬಗ್ಗೆ.

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನಲ್ಲಿ ದರಖಾಸ್ತು ಭೂಮಿ ಬಗ್ಗೆ ಸರ್ಕಾರ ಹಿಂದುಳಿದ ಪ್ರದೇಶವೆಂದು ತೀರ್ಮಾನ ಮಾಡಿದ್ದಾರೆ. ಹಾಗೆ ಅವರಿಗೆ ದರ ಖಾಸ್ತು ಭೂಮಿ ಕೊಡಬೇಕಾದರೆ ೩೬೦೦ ರೂಪಾಯಿ ವಾರ್ಷಿಕ ಪರಮಾನ ಇರಬೇಕು ಅಂತ ಹೇಳಿದ್ದಾರೆ. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ ದಿನಗೂಲಿಯು ಕೆಲಸದವರಿಗೂ ೩೬೦೦ ರೂ